ಆ) ಅನ್ವಯಿಸುವುದಿಲ್ಲ.

ದ್ವಿತೀಯ ಪಿ.ಯು ಪರೀಕ್ಷೆಯ ಪ್ರವೇಶ ಪತ್ರದಲ್ಲಿ ಜಾತಿ ನಮೂದನೆ

158 : (210)

ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ.ಲೇಔಟ್)

ಅ) 2012ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು,

ಆ) ಈ ವಿದ್ಯಾರ್ಥಿ/ವಿದ್ಯಾರ್ಥಿನಿಗಳಿಗೆ ನೀಡಿರುವ ಪ್ರವೇಶ ಪತ್ರದಲ್ಲಿ ಜಾತಿ ನಮೂದಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ ಕಾರಣಗಳೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

2012ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾದ –

ವಿದ್ಯಾರ್ಥಿಗಳ ಸಂಖ್ಯೆ – 3,21,957

ವಿದ್ಯಾರ್ಥಿನಿಯರ ಸಂಖ್ಯೆ – 2,76,458

ಒಟ್ಟು 5,98,415

ಆ) ಪ್ರವೇಶ ಪತ್ರದಲ್ಲಿ ಜಾತಿ ನಮೂದಿಸಿರುವುದಿಲ್ಲ ಆದರೆ, ಜಾತಿ ಸಮೂಹ (Caste group) ಎಂದು ನಮೂದಿಸಲಾಗಿದೆ. ಕೆಲವು ವಿದ್ಯಾರ್ಥಿಗಳು ಪ್ರಥಮ ಪಿ.ಯು.ಸಿ. ಗೆ ದಾಖಲಾತಿ ಮಾಡಿಕೊಳ್ಳುವಾಗ ಓ.ಎಂ.ಆರ್. ಅರ್ಜಿ ನಮೂನೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ವಿವರಗಳನ್ನು ಭರ್ತಿ ಮಾಡಿ ಹಾಗೂ ಶೇಡಿಂಗ್ ಮಾಡಿ, ಕೇಂದ್ರ ಕಚೇರಿಗೆ ತರಿಸಿಕೊಂಡು ಸ್ಕ್ಯಾನಿಂಗ್ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಓ.ಎಂ.ಆರ್. ನಮೂನೆಗಳಲ್ಲಿ ವಿವರಗಳನ್ನು ಭರ್ತಿ ಮಾಡಿ ಶೇಡಿಂಗ್ ಮಾಡುವಾಗ ಕೆಲವು ವಿವರಗಳನ್ನು ತಪ್ಪಾಗಿ ನಮೂದಿಸಿರುತ್ತಾರೆ ಇಂತಹ ತಪ್ಪುಗಳನ್ನು ತಿದ್ದುಪಡಿ ಮಾಡುವ ಸಲುವಾಗಿ ಕೊನೆಯ ಹಂತವಾಗಿ ವಿದ್ಯಾರ್ಥಿಗಳ ಪ್ರವೇಶ ಪತ್ರಗಳಲ್ಲಿ ಜಾತಿ ಸಮೂಹ (Caste group) ಸೇರಿದಂತೆ ಇತರೆ ವಿವರಗಳನ್ನು ನಮೂದಿಸಲಾಗಿರುತ್ತದೆ. ಈ ಜಾತಿ ಸಮೂಹದಲ್ಲಿನ ತಿದ್ದುಪಡಿಗಳಿಗಾಗಿ ನೂರಾರು ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಪಡೆದುಕೊಂಡು ನಂತರ ಕೇಂದ್ರ ಕಚೇರಿಗೆ ಕಳುಹಿಸಿ ಕೊಡುತ್ತಿರುತ್ತಾರೆ. ಇಂತಹ ಜಾತಿ ಸಮೂಹ ಅಥವಾ ಯಾವುದೇ ವಿವರಗಳಲ್ಲಿ ಉಳಿದಿರಬಹುದಾದ ತಪ್ಪುಗಳನ್ನು ತಿದ್ದುಪಡಿ

ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ಈ ಬಾರಿ ಜಾತಿ ಸಮೂಹ ಎಂದು ಪ್ರವೇಶ ಪತ್ರದಲ್ಲಿ ಮುದ್ರಿಸಲಾಗಿರುತ್ತದೆ.

ಪರೀಕ್ಷೆ – ಫಲಿತಾಂಶ ಪ್ರಕಟಿಸಿದ ನಂತರ ಇಂತಹ ಯಾವುದೇ ತಿದ್ದುಪಡಿಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ Caste group ಗಳಿಗೆ ಸಂಬಂಧಿಸಿದಂತೆ ಉತ್ತೀರ್ಣ ವಿದ್ಯಾರ್ಥಿಗಳ ಹಾಗೂ ಹೆಚ್ಚು ಅಂಕಗಳಿಸಿರುವ ವಿವರಗಳನ್ನು ಬೇರೆ ಬೇರೆ ಇಲಾಖೆಯವರು ಮತ್ತು ಸಂಘ ಸಂಸ್ಥೆಗಳು ಮಾಹಿತಿಗಾಗಿ ಮನವಿ ಸಲ್ಲಿಸುತ್ತಿದ್ದು. ಕರಾರುವಕ್ಕಾದ Caste group ಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಒದಗಿಸುವ ಅನಿವಾರ್ಯತೆ ಉಂಟಾಗುತ್ತದೆ. ವಿದ್ಯಾರ್ಥಿಗಳಿಗೆ Caste group ಆಧಾರದಿಂದ ಸಿಗುವಂತಹ ಸೌಲಭ್ಯ ಪಡೆಯುವಲ್ಲಿ ವಂಚನೆಯಾಗಬಾರದೆಂಬ ಉದ್ದೇಶದಿಂದಲೂ ಸಹ ಪ್ರವೇಶ ಪತ್ರಗಳಲ್ಲಿ Caste group ನ್ನು ಮುದ್ರಿಸಲಾಗಿರುತ್ತದೆ.

Caste group ನ್ನು ಪ್ರವೇಶ ಪತ್ರಗಳಲ್ಲಿ ಮುದ್ರಿಸಿರುವ ಕುರಿತಂತೆ ಕೆಲವು ಸಂಘಟನೆಗಳು ವಿರೋಧ ವ್ಯಕತಪಡಿಸಿರುವ ಹಿನ್ನೆಲೆಯಲ್ಲಿ Caste group ನ್ನು ಅಳಿಸಿ ಹಾಕಲು ಕ್ರಮ ಕೈಗೊಳ್ಳಲಾಗಿದೆ.

ಬೀದರ್ ಅಂಗನವಾಡಿ ಕೇಂದ್ರಗಳ ವಿವರ

103 : (200)

ಶ್ರೀ ಬಂಡೆಪ್ಪ ಖಾಶೆಂಪೂರ್ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂಗನಾಡಿ ಕೇಂದ್ರ ಮತ್ತು ಮಿನಿ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ನೀಡುವುದು)

ಆ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂಗನವಾಡಿ ಮತ್ತು ಮಿನಿ ಅಂಗವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿದೆಯೇ : (ವಿವರಗಳನ್ನು ನೀಡುವುದು)

ಇ) ಹಾಗಿಲ್ಲದಿದ್ದಲ್ಲಿ ಸ್ವಂತ ಕಟ್ಟಡ ಹೊಂದಿರುವ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ನೀಡುವುದು)

ಈ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಇದುವರೆವಿಗೂ